ಸಾಕ್ಷಿಯನ್ನು ದಿಃ 02-12-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ. ವಿ ಸಿ ಎಸ್ ವಕೀಲರಿಂದಃ (ಪ್ರತಿವಾದಿ ನಂ.1 ರಿಂದ 4 ರ ಪರವಾಗಿ)**

ನಮ್ಮ ಅಳಿಯ ಯಲ್ಲಪ್ಪ ನಮ್ಮೊಂದಿಗೆ ಹಳಿಹಾಳ ತಾಲೂಕಿನ ಹಾವಳಗಿಯಲ್ಲಿ ವಾಸಿಸುತ್ತಿದ್ದ. ಆತ ಹುಟ್ಟಿದಾಗಿನಿಂದ ನನ್ನ ಬಳಿ ಇದ್ದ. ಆತ 7 ನೇ ತರಗತಿಯವರೆಗೆ ಹಾಳಗಿಯಲ್ಲಿ ಓದಿದ್ದು, ನಂತರ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಯಲಬುರ್ಗಾದಲ್ಲಿ ಮುಗಿಸಿದ್ದಾನೆ. ಎಸ್ ಎಸ್ ಎಲ್ ಸಿ ಮುಗಿಸಿದ ನಂತರ ವಾಪಾಸ್ಸು ನಮ್ಮ ಮನೆಗೆ ಬಂದನು. 3 ನೇ ಪ್ರತಿವಾದಿ ಮಲ್ಲವ್ವ ನನ್ನ ಬಳಿ ಇರಲಿಲ್ಲ. 2 ನೇ ಪ್ರತಿವಾದಿ ನೀಲವ್ವ ನನ್ನ ಸಹೋದರಿ ಕಮಲವ್ವನ ಬಳಿ ಇರುತ್ತಿದ್ದಳು. ಅಲ್ಲಿ ಆಕೆ 8 ನೇ ತರಗತಿಯವರೆಗೆ ಶಾಲೆ ಕಲಿತಿದ್ದಾಳೆ. ಯಲ್ಲಪ್ಪ ನಮ್ಮ ಬಳಿ ಇದ್ದ ಬಗ್ಗೆ ರೇಷನಕಾರ್ಡ ಓಟರ್ ಐಡಿ ದಾಖಲೆಗಳು ಇವೆ. ನಿಪಿಃ 20 ಮತ್ತು 21 ರಲ್ಲಿ ಯಲ್ಲಪ್ಪ ಅಂತ ಮಾತ್ರ ಬರೆದಿದ್ದು ತಂದೆಯ ಹೆಸರು ಮತ್ತು ಅಡ್ಡ ಹೆಸರು ಬರೆದಿಲ್ಲ ಎಂದರೆ ಸರಿ. ಸದರಿ ದಾಖಲೆಗೆ ಕೇವಲ ಒಬ್ಬರ ಸಹಿ ಇದ್ದು ಇನ್ನು ಇಬ್ಬರ ಸಹಿ ಖಾಲಿ ಇದ್ದು, ದಿನಾಂಕ ಸಹ ನಮೂದಿಸಿಲ್ಲ ಎಂದರೆ ಸರಿ. ಹಾಗಾಗಿ ನಿಪಿಃ 20 ಮತ್ತು 21 ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ಈ ಕೇಸಿಗೋಸ್ಕರ ನಿಪಿಃ 18 ರಿಂದ 22 ದಾಖಲೆಗಳು ಸೃಷ್ಟಿ ಮಾಡಿ ಹಾಜರು ಪಡಿಸಿದ ದಾಖಲೆಗಳು ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ.5 ರ ಪರ ವಕೀಲರು ಶ್ರೀ ವಿ ಸಿ ಎಸ್ ರವರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)**

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.